ಸ್ವಪ್ನ ಕುಮುದಳ ಜೊತೆ ಮಾತನಾಡುತ್ತಲೇ ನಡುವೆ... ತನ್ನ ವಿಭಾಗಕ್ಕೆ ಫೋನ್ ಮಾಡಿ ತನ್ನ ಛೇಂಬರ್ ಪಕ್ಕದ ಸ್ಪೆಷಲ್‌ವಾರ್ಡ್ ಸಿದ್ಧಮಾಡಿಟ್ಟು... ಅದರ ಗೋಡೆಗೆಲ್ಲ ಪ್ರಾಣಿ, ಪಕ್ಷಿ, ಹೂ... ನದಿ, ಸಮುದ್ರ, ದೋಣಿಗಳ ಪೋಸ್ಟರ್ ಹಚ್ಚಲು ನಿರ್ದೇಶನ ನೀಡಿದ್ದಳು. ಅಂತಹ ಪೋಸ್ಟರ್‌ಗಳನ್ನು ಆಕೆ ಸಂಗ್ರಹ ಮಾಡಿಡುವುದೇ ಮಕ್ಕಳ ಮನಸ್ಸನ್ನು ಅರಳಿಸುವ ಕಾರಣಕ್ಕಾಗಿ. ಕಂಗೆಟ್ಟು ಮುರುಟಿರುವ 'ಮನಸ್ಸನ್ನು' ಹಗುರಗೊಳಿಸುವುದೇ ತನ್ನ ವೈದ್ಯದ ಸಾಧನೆ ಎಂದು ಭಾವಿಸಿದವಳು ಈ ಡಾ.ಸ್ವಪ್ನ ಹೆಗ್ಡೆ.

ಸೈಕಿಯಾಟ್ರಿ ವಿಭಾಗದ ಮುಖ್ಯಸ್ಥೆ ಡಾ. ಸ್ವಪ್ನ ಹೆಗ್ಡೆಯವರ ಆದೇಶದಂತೆ, ಆಕೆಯ ಛೇಂಬರ್ ಪಕ್ಕದ ಸ್ಪೆಷಲ್ ಸ್ಪೆಷಲ್ ವಾರ್ಡನ್ನು ಕೌಶಿಕನಿಗಾಗಿಯೇ ಸಿದ್ಧಪಡಿಸಲಾಗಿತ್ತು. ಆ ಕೊಠಡಿಯಲ್ಲಿ ಅಜ್ಜ ರಾಮಯ್ಯ ಆಳ್ವರನ್ನು, ಕುಮುದಳ ತಂಗಿ ಕ್ಷಮಾ, ಅಕ್ಕ ಕೃಪಾದೇವಿ, ಆಕೆಯ ಮಕ್ಕಳಾದ ಚಂದನ ಮತ್ತು ವಂದನರನ್ನು ಕೂರಿಸಲಾಗಿತ್ತು.

ಇದೀಗ... ಇಲ್ಲಿ ವಾರ್ಡಿನಲ್ಲಿ ವೈದ್ಯೆ ಸ್ವಪ್ನ ಹೆಗ್ಡೆಯ ಕತೆ... ನಿರಾತಂಕವಾಗಿ ಮುಂದುವರಿದಿತ್ತು. ಮುಖ್ಯ ಕತೆಯ ಮೈಗೆ, ಹಲವಾರು ಉಪಕತೆಗಳು ಹುಟ್ಟಿಕೊಂಡು, ಕತೆ ಆಸಕ್ತಿದಾಯವಾಗಿಯೇ ಹರಿಯುತ್ತಿತ್ತು. ಹೀಗೆ... ಕತೆ ಮುಂದುವರಿಯುತ್ತಿರುವಾಗ ಕಥಾ ಎಳೆಯನ್ನು ಅರ್ಧದಲ್ಲೇ ತುಂಡರಿಸಿದವಳೆ ಸ್ವಪ್ನ, ಕುಮುದಳಿಗೆ 'ಬಾ ಕುಮುದ ಉಳಿದ ಕತೆಯನ್ನು ನನ್ನ ಕೋಣೆಯಲ್ಲೇ ಹೇಳ್ತೇನೆ–ಕೌಶಿಕನನ್ನು ಎತ್ಕೋ' ಅಂತಾ ಹೇಳುವಷ್ಟರಲ್ಲಿ ಕೌಶಿಕ ತಟ್ಟನೆ ಅಮ್ಮನತ್ತ ಕೈ ಚಾಚಿದ್ದ. ಅದುವರೆಗೆ ಮರದ ಕೊರಡಿನಂತೆ ಕೂಡಿದ್ದ ಮಗು ಕೈ ಚಾಚಿದೊಡನೆ ತಾಯಿ ಕುಮುದಳಿಗೆ ಹೊಸ ಜೀವ ಬಂದಂತಾಗಿತ್ತು. ಒಂದರೆಗಳಿಗೆ ಅಚ್ಚರಿಯೂ ಆಕೆಯನ್ನು ಆವರಿಸದೇ ಇರಲಿಲ್ಲ! ಖಂಡಿತ, ಇದು ದೇವರ ದಯೆಯೇ... ಎನ್ನುವಂತಹ ಭಾವವನ್ನು ಹೊತ್ತು, ಆಕೆ ತಟ್ಟನೆ ಮಗನನ್ನು ಎತ್ತಿಕೊಂಡು ಸ್ವಪ್ನಳ ಬಾಲವಾಗಿದ್ದಳು. ಡಾ. ಸ್ವಪ್ನ ಹೆಗ್ಡೆ ಮುಂದೆ, ಕೌಶಿಕನನ್ನು ಎತ್ತಿಕೊಂಡ ಕುಮುದ ಹಿಂದೆ. ಡಾ. ಸ್ವಪ್ನಗೆ ಅನಿಸುತ್ತಿತ್ತು. ತನ್ನ ಪ್ರಯತ್ನ ಫಲ ಕೊಡುತ್ತಾ ಇದೆ ಎಂದು.

ಡಾ. ಸ್ವಪ್ನ ಹೆಗ್ಡೆ ತನ್ನ ವಿಭಾಗದೊಳಗೆ ಬಂದು ಕೌಶಿಕನಿಗಾಗಿಯೇ ಸಿದ್ಧ ಮಾಡಿಟ್ಟಿದ್ದ ವಾರ್ಡಿನೊಳಗೆ ಮೊದಲು ತಾನು ಹೊಕ್ಕು ಕುಮುದಳನ್ನು ಕೈ ಸನ್ನೆಯಲ್ಲಿ ಒಳ ಕರೆದಿದ್ದಳು.

